ಶ್ರೀ ಎಂ. ಮಂಹದೇವ್.—ಪುಟ್ಟಣ್ಣ ಕಣಗಾಲ್‌ರವರ ಸಾಮಾಜಿಕ ಚಿತ್ರಗಳಿಗೆ ಬೇರೆ ನಿರ್ದೇಶಕರಿಗೆ ದೊರೆಯುವ ಸಾಲಭ್ಯ ಅಂದರೆ ಟ್ಯಾಕ್ಸ್ ಫ್ರೀ ಸರ್ಕಾರದ ಪ್ರೋತ್ಸಾಹ ಇನ್ನು ಮುಂತಾದವು ದೊರೆಯುತ್ತಾ ಇಲ್ಲ, ಅಡ್ಡಿ ಆಂತಕ ಇದೆ ಎಂದು ಸಾರ್ವಜನಿಕರಿಂದ ದೂರುಗಳು ಬಂದಿರುವುದು ನಿಜವೇ ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರಿಸುತ್ತೇನೆ.

ರಾಷ್ಟ್ರಾಧ್ಯಕ್ಷರ ಹಾಗೂ ರಾಜ್ಯಪಾಲರ ಒಪ್ಪಿಗೆಗಾಗಿ ಸಲ್ಲಿಸಿದ್ದ, ಇನ್ನೂ ಒಪ್ಪಿಗೆ ಸಿಗದಿರುವ ವಿಧೇಯಕಗಳ ಸಂಖ್ಯೆಯ ವಿಚಾರ.

೮೧. ಶ್ರೀ ಕೆ. ಜಿ. ಮಂಹೇಶ್ವರಪ್ಪ (ಮಾಯಕೊಂಡ)—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಎ) ರಾಷ್ಟ್ರಾಧ್ಯಕ್ಷರ ಹಾಗೂ ರಾಜ್ಯಪಾಲರ ಒಪ್ಪಿಗೆಗಾಗಿ ಕಳಂಹಿಸಲಾಗಿದ್ದು ಇನ್ನೂ ಒಪ್ಪಿಗೆ ಸಿಗಬೇಕಾಗಿರುವ ವಿಧೇಯಕಗಳ ಸಂಖ್ಯೆ ಎಷ್ಟು ? ಮತ್ತು ಎಷ್ಟು ಕಾಲದಿಂದ ಒಪ್ಪಿಗೆ ನಿರೀಕ್ಷಿಸಲಾಗಿದೆ.

ಬಿ) ಹಾಗೆ ಒಪ್ಪಿಗೆಯನ್ನು ತ್ವರಿತವಾಗಿ ಪಡೆಯಲು ಸರ್ಕಾರವು ಯಾವುದೇ ಕ್ರಮಗಳನ್ನು ಕೈಗೊಳ್ಳಲು ಆಲೋಚಿಸಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು).—

ಎ) ಲಗತ್ತಿಸಲಾಗಿರುವ ವಿವರಣೆಯಂತೆ, ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸಲಾದ ಒಂಬತ್ತು ವಿಧೇಯಕಗಳಿಗೆ ಇನ್ನೂ ಒಪ್ಪಿಗೆ ಸಿಗಬೇಕಾಗಿದೆ. ರಾಜ್ಯಪಾಲರಿಗೆ ಸಲ್ಲಿಸಿದ ಎಲ್ಲ ವಿಧೇಯಕಗಳಿಗೂ ಒಪ್ಪಿಗೆ ದೊರೆತಿದೆ.

ಬಿ) ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಪದೇ ಪದೇ ನೆನಪಿಸಲಾಗುತ್ತಿದೆ.

ರಾಷ್ಟ್ರಾಧ್ಯಕ್ಷರ ಸಮ್ಮತಿಗಾಗಿ ಒಪ್ಪಿಸಿದ ವಿಧೇಯಕಗಳ ಪಟ್ಟಿ

ಕ್ರಮಸಂಖ್ಯೆ	ವಿಧೇಯಕದ ಹೆಸರು	ಕಳುಹಿಸಿದ ದಿನಾಂಕ
೧.	ಅತ್ಯವಶ್ಯ ವಸ್ತುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, ೧೯೭೬.	೨೫-೧೧-೧೯೭೮
೨.	ಕರ್ನಾಟಕ ಸಿವಿಲ್ ಸೇವೆಗಳ ವಿಧೇಯಕ, ೧೯೭೯.	೨೯-೬-೧೯೭೯
೩.	ಕರ್ನಾಟಕ ಜೀಂದಿ ಕೆಲಸಗಾರರ ಕಲ್ಯಾಣ ನಿಧಿ ವಿಧೇಯಕ, ೧೯೮೧	೩೦-೧೧-೧೯೮೧
೪.	ಕಂಟ್ರಾಕ್ಟ್ ಕ್ಯಾರೇಜಂಗಳ (ತಿದ್ದುಪಡಿ) ವಿಧೇಯಕ, ೧೯೮೨.	೨೭-೮-೧೯೮೨
೫.	ಕರ್ನಾಟಕ ಸ್ಥಳೀಯ ಪ್ರದೇಶಗಳಲ್ಲಿ ಬಳಕೆ, ಉಪಯೋಗ ಅಥವಾ ಮಾರಾಟದ ಸಲುವಾಗಿ ಸರಕುಗಳ ಪ್ರವೇಶ ತೆರಿಗೆ (ತಿದ್ದುಪಡಿ) ವಿಧೇಯಕ, ೧೯೮೩.	೧೨-೯-೧೯೮೩
೬.	ಕರ್ನಾಟಕ ಮನರಂಜನಾ (ತಿದ್ದುಪಡಿ) ವಿಧೇಯಕ, ೧೯೮೩.	೩೦-೧೧-೧೯೮೩
೭.	ಕರ್ನಾಟಕ ಸ್ಥಳೀಯ ಪ್ರದೇಶಗಳಲ್ಲಿ ಬಳಕೆ, ಉಪಯೋಗ ಅಥವಾ ಮಾರಾಟದ ಸಲುವಾಗಿ ಸರಕುಗಳ ಪ್ರವೇಶ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, ೧೯೮೩.	೩೦-೧೧-೧೯೮೩
೮.	ಕರ್ನಾಟಕ ವೃತ್ತಿಗಳು, ವ್ಯಾಪಾರಗಳು ದಂದೆ (ಕಸುಬು) ಮತ್ತು ಉದ್ಯೋಗಗಳ ಮೇಲೆ ತೆರಿಗೆ (ತಿದ್ದುಪಡಿ) ವಿಧೇಯಕ, ೧೯೮೩.	೩೦-೧೧-೧೯೮೩

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಅಧ್ಯಕ್ಷರೆ, ರಾಷ್ಟ್ರಪತಿಯವರ ಅನುಮತಿಗಾಗಿ ಕಳಿಸಿರ ತಕ್ಕ ೮ ಬಿಲ್ಲುಗಳಲ್ಲಿ ೧೯೭೮ನೇ ಇಸವಿ ನವೆಂಬರ್‌ನಲ್ಲಿ ಕಳಿಸಿರತಕ್ಕ ಎಸೆನ್‌ಷಿಯಲ್ ಕಮಾಡಿಟೀಸ್ ಬಿಲ್ಲೂ ಸಹ ಪೆಂಡಿಂಗ್‌ನಲ್ಲಿದೆ. ಮಾನ್ಯ ಸಚಿವರು ಗಮನಿಸಬೇಕು. ಸಂವಿಧಾನದ ಪರಿಚ್ಛೇದ ಎರಡರಲ್ಲಿ ಇರುವ ಹಾಗೆ ಅನುಮತಿಗಾಗಿ ಕಳಿಸಿದ ಕೂಡಲೇ ರಾಷ್ಟ್ರಪತಿಯವರಾಗಲಿ, ರಾಜ್ಯಪಾಲರಾಗಲಿ ತಕ್ಷಣ ಅನುಮತಿ ಕೊಟ್ಟಿದ್ದೇವೆ ಅಥವಾ ಅನುಮತಿಯನ್ನು ತಡೆಹಿಡಿದಿದ್ದೇವೆ ಎನ್ನುವ ಘೋಷಣೆಯನ್ನು ಮಾಡಬೇಕು. ಅದು ಸಂವಿಧಾನಾತ್ಮಕವಾದಂಥ ಕರ್ತವ್ಯ ಆ ರೀತಿ ಘೋಷಣೆ ಮಾಡಿರತಕ್ಕ ವರದಿ ರಾಜ್ಯಪಾಲರಿಂದಾಗಲಿ ಅಥವಾ ರಾಷ್ಟ್ರಾಧ್ಯಕ್ಷರಿಂದಾಗಲಿ ನಿಮಗೆ ಬಂದಿದೆಯೇ ? ಆ ವರಿಪಾಠವನ್ನು ಪರಿಪಾಲಿಸಲಾಗುತ್ತಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—೮ ಬಿಲ್ಲುಗಳನ್ನು ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೋಸ್ಕರ ಕಳಿಸಿರುವುದರ ಈ ರೀತಿ ಇದೆ.

1. The Essential Commodities (Karnataka Amendment) Bill, 1976, sent on 25-11-1978.

2. The Karnataka Civil Services Bill, 1979 sent on 29-6-1979.

3. The Karnataka Toddy Workers Welfare Fund Bill, 1981 sent on 30-11-1981

4. The Contract Carriages (Amendment) Bill, 1982 sent on 27-8-1982.

5. The Karnataka Tax on Entry of Goods into local Areas for Consumption, Use or Sale therein (Amendment) Bill, 1983 sent on 12-9-1983.

6. The Karnataka Ehtertainments (Amendment) Bill, 1983 sent on 30-11-1983.

7. The Karnataka Tax on Entry of Goods into Local Areas for Consumption, Use or Sale therein (Second Amendment) Bill, 1983 sent on 30-11-1983.

8. The Karnataka Tax on Professions, Trades, Callings and Employments (Amendment) Bill, 1983 sent on 30-11 1983.

Besides these, the following three Bills have been sent for obtaining views of the Government of India–

1. The Limitation (Karnataka Amendment) Bill, 1983 sent on 27-9-1983.

2. Karnataka Money-lenders (Amendment) Bill, 1983 sent on 14-10-1983.

3. Karnataka Pawn-Brokers (Amendment) Bill, 1983 sent on 14-10-1983.

In addition to the above, the following five ordinances sent for the instructions of the President are also pending, namely.—

1. The Karnataka Prevention of Dangerous Activities of Bootleggers, Drug-Offenders, Goondas, Immoral Traffic Offenders and Slum Grabbers Ordinance, 1983 ... sent on 21-5-1983
2. The Bangalore Development Authority (Amendment) Ordinance, 1982 ... sent on 6-8-1983
3. The Karnataka Tax on Entry of Goods into Local Areas for Consumption, Use or Sale Therein (Second Amendment) Ordinance, 1983 ... sent on 14-10-1983
4. The Karnataka Forest Supply Ferest Produce by Government (Revision of Agreements) Ordinance, 1983 ... sent on 24-10-1983
5. The Mysore (Religious and Charitable) Inams Abolition (Amendment) Ordinance, 1983 ... sent on 28-12-1983

The last question that is asked is article 200 of the Constitution. The article has been interpreted by the Supreme Court and according to the interpretation and Article 141, there is nothing that we can do se far as the State Government is concerned in respect o the time within which these things should be cleared.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಇದು ಬಹಳ ಮುಂಖ್ಯವಾದ ಹಾಗೂ ಸಂವಿಧಾನಾತ್ಮಕವಾದ ಪ್ರಶ್ನೆ. ಇದು ನಾವು ಅಂಗೀಕರಿಸಿ ಮೇಲಿನವರ ಒಪ್ಪಿಗೆಗಾಗಿ ಕಳುಹಿಸಿತಕ್ಕಂತಹ ವಿಧೇಯಕಗಳು, ಮೂಲೆಗುಂಪಾಗಿವೆ. ಇದರ ಬಗ್ಗೆ ಮಾನ್ಯ ಸಚಿವರು ತಮ್ಮ ಅಸಹಾಯಕತೆಯನ್ನು ಪ್ರದರ್ಶನ ಮಾಡಿದ್ದಾರೆ. ಮಾನ್ಯ ಸಚಿವರು ನ್ಯಾಯವೆತ್ತ, ನ್ಯಾಯವಾದಿಗಳಾಗಿದ್ದಾರೆ. ಜೊತೆಗೆ ಸಂಬಂಧ ಪಟ್ಟಂತಹ ಮಂತ್ರಿಗಳೇ ಆಗಿರುವುದರಿಂದ, ಇದರ ಬಗ್ಗೆ ಎಲ್ಲ ರಾಜ್ಯಗಳ ಸಂಬಂಧಪಟ್ಟ ಸಚಿವರ ಸಭೆಯನ್ನು ಕರೆದು, ಇದಕ್ಕೆ ಒಂದು ಸೂಕ್ತವಾದ ಪ್ರತಿಭಟನೆ ಅಥವಾ ಸಲಹೆ ಮಾಡತಕ್ಕಂತಹ ಪ್ರಯತ್ನ ವನ್ನೇನಾದರೂ ಮಾಡುತ್ತಾರೆಯೇ?

SRI L. LAKSHMISAGAR.—Mr. Speaker, Sir, I will read out only one sentence from the decision of the Supreme Court :

> "The Constitution does not impose any time limit within which the Governor should make any of his declarations and there is no means to compel him if he simply keeps Bills pending before him indefinitely"

This point is attracting the attention of all the right thinking people. This is one of the subjects being considered on various forums including the forum relating to the Centre-State relations. Thie has been diocussed and it has been suggested time and again

that there must be some time limit within which clearance must be there either from the Governor or the President.

ಶ್ರೀ ಎಸ್. ಸೂರ್ಯನಾರಾಯಣರಾವ್.—ಬೇರೆ ರಾಜ್ಯಗಳಲ್ಲಿ ಈ ರೀತಿಯಲ್ಲಿ ಬಿಲ್ಲುಗಳು ಎಷ್ಟು ಪೆಂಡಿಂಗ್ ಇದ್ದಾವೆ ಎಂಬುದನ್ನು ಸರ್ಕಾರದವರು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ? ಈ ತರಹ ಪೆಂಡಿಂಗ್ ಇರುವುದಕ್ಕೆ ಕಾರಣವಾದರೂ ಏನು ?

SRI A. LAKSHMISAGAR.—Sir, I want notice.

ಶ್ರೀ ಪಿ. ರಾಮುದೇವ್.—ತಳಿದ ಅಧಿವೇಶನದಲ್ಲಿ ೩ ಟ್ಯಾಕ್ಸೇಷನ್ ಬಿಲ್‌ಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ನಂತರ ಮುಂದೆ ರಾಜ್ಯಪಾಲರ ಸಹಿಗಾಗಿ ಹೋಗಿದ್ದಂತಹ ಈ ಮೂರು ಬಿಲ್ಲುಗಳು ವಾಪಸ್ಸು ಬಂದಿದ್ದಾವೆಯೇ. ಅವುಗಳಿಗೆ ಮಂಜೂರಾಗಿ ಸಿಕ್ಕಿದೆಯೇ ? ಏಕೆಂದರೆ ಈ ವರ್ಷದಿಂದ ಟ್ಯಾಕ್ಸೇಷನ್ ಮಾಡಬೇಕಾಗಿತ್ತು. ಆದು ಏನಾಗಿದೆ ಎನ್ನುತಕ್ಕಂತಹದ್ದನ್ನು ಸ್ವಲ್ಪ ಹೇಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಸಂವಿಧಾನದ ಪ್ರಕಾರ ರಾಜ್ಯಪಾಲರಿಗೆ ಕಳುಹಿಸತಕ್ಕ ಮನಿ ಬಿಲ್ಸ್ ಗಳಿಗೆ ಅವರು ಒಪ್ಪಿಗೆ ಕೊಟ್ಟು ನಮಗೆ ವಾಪಸ್ಸು ಕಳುಹಿಸಬಹುದು. ಆದರೆ ಜೊತೆಗೆ ನಾವು ಕಳುಹಿಸಿದಂತಹ ಮನಿ ಬಿಲ್‌ಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವುದಕ್ಕೋಸ್ಕರ ಅವರಿಗೆ ಕಳುಹಿಸತಕ್ಕ ಸಂವಿಧಾನದ ಅಧಿಕಾರವೂ ಇದೆ. ಸಂವಿಧಾನದ ಪ್ರಕಾರ ರಾಜ್ಯಪಾಲರು ಆ ಬಿಲ್‌ಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅವು ಅಲ್ಲಿವೆ.

ಶ್ರೀ ಎಚ್. ನಾಗನಗೌಡ —ಅಧ್ಯಕ್ಷರಿಗೆ ಕಳುಹಿಸಿರತಕ್ಕ ಬಿಲ್ಸ್‌ಗಳು ಅಲ್ಲಿ ಪೆಂಡಿಂಗ್ ಇದ್ದಾವೆ ಎಂಬುದಾಗಿ ಹೇಳಿದ್ದಾರೆ. ಆದರೆ ಇದರ ಬಗ್ಗೆ ನನ್ನ ಒಂದು ವಿಜ್ಞಾಪನೆ ಏನೆಂದರೆ, ಇದರ ಬಗ್ಗೆ ರಾಜಕಾರಣ ಮಾಡಬೇಡಿ. ಕಾನೂನು ಬದ್ಧವಾದ ವಿಷಯದಲ್ಲಿ ರಾಜಕಾರಣ ಮಾಡುವುದಕ್ಕೆ ಆಸ್ಪದ ಕೊಡಬೇಡಿ ಎಂಬುದಾಗಿ ನನ್ನ ಒಂದು ಸಲಹೆ.

ಶ್ರೀ ಎ. ಲಕ್ಷ್ಮೀಸಾಗರ್.—ರಾಜಕಾರಣ ಮಾಡುವವರು ನಾವಲ್ಲ. ರಾಜ್ಯದ ಜನತೆಯ ಹಿತದೃಷ್ಟಿಯಿಂದ ತೆಗೆದುಕೊಳ್ಳತಕ್ಕಂತಹ ಕ್ರಮಗಳಲ್ಲಿ ಬೇಗನೆ ತೀರ್ಮಾನ ಮಾಡಿ ಎಂಬುದಾಗಿ ಬರೆದಿದ್ದೇವೆ.

ಶಿಕಾರಿಪುರ ಮತ್ತು ಚಿಕ್ಕಬಳ್ಳಾಪುರ ನಡುವೆ ಬಸ್ಸಿನ ಅವ್ಯವಸ್ಥಿತ ಓಡಾಟದ ಬಗ್ಗೆ.

(೩೨) ೬೦. ಶ್ರೀ ಬಿ ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ಶಿಕಾರಿಪುರ ಚಿಕ್ಕಬಳ್ಳಾಪುರ ಮಾರ್ಗದ ಸರ್ಕಾರಿ ಬಸ್ಸು ಚಿಕ್ಕಬಳ್ಳಾಪುರದಿಂದ ವಾಪಸ್ಸು ಬರುವಾಗ ಸಮಯಕ್ಕೆ ಸರಿಯಾಗಿ ಶಿಕಾರಿಪುರಕ್ಕೆ ಬರದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

(ಆ) ಡಿಸೆಂಬರ್ ತಿಂಗಳು ೧ನೇ ತಾರೀಖಿನಿಂದ ೧೫ರ ವರೆಗೆ ಚಿಕ್ಕಬಳ್ಳಾಪುರದಿಂದ ಬಿಟ್ಟ ಸರ್ವಿಸು ಶಿವಮೊಗ್ಗ ತಲುಪಿದ ಸಮಯ ತಿಳಿಸಲು ವಿನಂತಿ.

(ಇ) ಈ ಅವ್ಯವಸ್ಥೆಯನ್ನು ತಪ್ಪಿಸಲು ಈವರೆಗೆ ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಸಾರಿಗೆ ರಾಜ್ಯ ಸಚಿವರು).—

(ಅ) ಹೌದು.

(ಆ) ಚಿಕ್ಕಬಳ್ಳಾಪುರದಿಂದ ೯–೩೦ ಗಂಟೆಗೆ ಹೊರಡುವ ಹಾಗೂ ಶಿವಮೊಗ್ಗ ೧೮–೩೦ಕ್ಕೆ ಸೇರುವ ಹಾಗೆ ಈ ವಾಹನಕ್ಕೆ ವೇಳೆಯನ್ನು ನಿಗಧಿಪಡಿಸಲಾಗಿದೆ. ಈ ವಾಹನ ಹೊರಡು ಮತ್ತು ತಲುಪಿದ ವೇಳೆಯನ್ನು ಈ ಕೆಳಗೆ ಕೊಟ್ಟಿದೆ.